ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 406(433)

ಸದಸ್ಯರ ಹೆಸರು : ಶ್ರೀ ಎಂ.ಎಲ್.ಅನಿಲ್‌ಕುಮಾರ್(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 15-09-2022

ಉತ್ತರಿಸುವವರು : ಮಾನ್ಯ ಮುಖ್ಯ ಮಂತ್ರಿಗಳು.

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿ 15ನೇ ಹಣಕಾಸು ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; ಸದರಿ ಅನುದಾನದಲ್ಲಿ ಬಿಡುಗಡೆಯಾದ ಅನುದಾನವನ್ನು ಕೆಲವೊಂದು ಅಗತ್ಯ ವಸ್ತುಗಳ ಹಾಗೂ ಇನ್ನಿತರ ಕಾಮಗಾರಿಗಳಿಗೆ ಬಳಸಿಕೊಳ್ಳಲು ಸರ್ಕಾರದಿಂದಲೇ ಮಾರ್ಗಸೂಚಿ ನೀಡಿದ್ದರು ಕೂಡ, ಗ್ರಾಮ ಪಂಚಾಯತಿಗಳಿಗೆ ಮತ್ತೆ ಸರ್ಕಾರದಿಂದಲೇ ಸದರಿ ಕಾಮಗಾರಿಗಳನ್ನು ಟೆಂಡರ್ ಆಗಿರುವವರ ಬಳಿಯೇ ಖರೀದಿ ಮಾಡಲು ಮಾರ್ಗಸೂಚಿ ನೀಡಿರುವುದು ಯಾವ ಉದ್ದೇಶಕ್ಕಾಗಿ; (ಸಂಪೂರ್ಣವಾದ ಮಾಹಿತಿ ನೀಡುವುದು) | ರಾಜ್ಯದಲ್ಲಿ 15ನೇ ಹಣಕಾಸು ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತಿಗಳಿಗೆ 2020-21ನೇ ಸಾಲಿನಿಂದ 2022-23ನೇ ಸಾಲಿನವರೆಗೆ ಬಿಡುಗಡೆಯಾದ ಅನುದಾನದ ವಿವರವು ಈ ಕೆಳಕಂಡಂತಿದೆ.<br>(ರೂ. ಲಕ್ಷಗಳಲ್ಲಿ)<br>ಯೋಜನೆ / 2020-21 / 2021-22 / 2022-23<br>15ನೇ ಹಣಕಾಸು ಆಯೋಗದ ಅನುದಾನ / 273445.00 / 201917.90 / 104677.50<br><br>ಸದರಿ ಅನುದಾನದಡಿ ಬಿಡುಗಡೆಯದ ಅನುದಾನಕ್ಕೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿ ಸಂಖ್ಯೆ:ಗ್ರಾಅಪಂರಾ 300 ಜಿಪಸ 2022, ದಿನಾಂಕ:01-07-2022ರ ಅನುಬಂಧ-IVರಲ್ಲಿ ನೈರ್ಮಲ್ಯ ಮತ್ತು ಬಯಲು ಬಹಿರ್ದೆಸೆ ಮುಕ್ತ ಸ್ಥಿತಿಯನ್ನು ಕಾಪಾಡಲು ತೆಗೆದುಕೊಳ್ಳಬಹುದಾದ ಚಟುವಟಿಕೆಗಳು ಹಾಗೂ ಕುಡಿಯುವ ನೀರು ಸರಬರಾಜು, ಮಳೆ ನೀರು ಕೊಯ್ಲು ಮತ್ತು ನೀರಿನ ಪುನರ್ ಬಳಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಪ್ರತಿಯೊಬ್ಬರಿಗೆ ಪ್ರತಿದಿನ ಕನಿಷ್ಠ 55 ಲೀಟರ್ ಕುಡಿಯುವ ನೀರನ್ನು ನಿಯಮಿತವಾಗಿ ಪೂರೈಸುವ ದೀರ್ಘಾವಧಿ ಸುಸ್ಥಿರ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ತೆಗೆದುಕೊಳ್ಳಬಹುದಾಗಿದೆ. ಆದರೆ, Grid Interactive Hybrid Solar Rooftop Power Plants ಹೊರತುಪಡಿಸಿ ಗ್ರಾಮ ಪಂಚಾಯತಿಗಳು ಸರ್ಕಾರದಿಂದ ಟೆಂಡರ್ ಆಗಿರುವವರ ಬಳಿಯೇ ಕಾಮಗಾರಿಗಳಿಗೆ ಅಗತ್ಯ ವಸ್ತುಗಳನ್ನು ಖರೀದಿ ಮಾಡಲು ಯಾವುದೇ ಮಾರ್ಗಸೂಚಿಗಳನ್ನು ಹೊರಡಿಸಿರುವುದಿಲ್ಲ. |

| | | |
|---|---|---|
| (ಆ) | ಗ್ರಾಮ ಪಂಚಾಯತಿಗಳಿಗೆ ಕೆಲವೊಂದು ಅಗತ್ಯ ವಸ್ತುಗಳ ಹಾಗೂ ಇನ್ನಿತರ ಕಾಮಗಾರಿಗಳ ಟೆಂಡರ್ ಕರೆಯಲು ಪಂಚಾಯತ್ ಮಟ್ಟದಲ್ಲಿ ಸಂಪೂರ್ಣವಾದ ಅಧಿಕಾರ ನೀಡದೆ, ರಾಜ್ಯ ಮಟ್ಟದಿಂದಲೇ ಟೆಂಡರ್ ಮಾಡುತ್ತಿರುವ ಉದ್ದೇಶವೇನು? (ವಿವರವಾದ ಮಾಹಿತಿ ನೀಡುವುದು) | ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿಗಳಲ್ಲಿನ ವಿದ್ಯುಚ್ಛಕ್ತಿ ಕೊರತೆಯನ್ನು ನೀಗಿಸುವ ಸಲುವಾಗಿ ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿ ಸೌರಮೂಲದಿಂದ ವಿದ್ಯುಚ್ಛಕ್ತಿಯನ್ನು ಪಡೆಯಲು ಮತ್ತು ಪ್ರಮುಖವಾಗಿ ಗ್ರಾಮ ಪಂಚಾಯತಿಗಳಲ್ಲಿನ ವಿದ್ಯುತ್ ಬಿಲ್ಲಿನ ಮೊತ್ತದಲ್ಲಿ ಉಳಿತಾಯ ಮಾಡಿ, ಗ್ರಾಮ ಪಂಚಾಯತಿಗಳನ್ನು ಆರ್ಥಿಕವಾಗಿ ಸದೃಢಗೊಳಿಸುವ ಸದುದ್ದೇಶದಿಂದ, **2020-21** ಮತ್ತು **2021-22**ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳ ಕಛೇರಿಗಳು, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಅಧೀನ ಇಲಾಖಾ ಕಛೇರಿಗಳು, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಲ್ಲಿ Grid Interactive Hybrid Solar Rooftop Power Plants ಗಳನ್ನು ಅಳವಡಿಸುವ ಯೋಜನೆಯನ್ನು ಸರ್ಕಾರವು ರೂಪಿಸಿದೆ.<br><br>ಈ ಮೊದಲು, ಕೆಲವು ಗ್ರಾಮ ಪಂಚಾಯತಿಗಳು ಸೋಲಾರ್ ರೂಫ್ ಟಾಪ್ ಗಳನ್ನು ಅಳವಡಿಸಿಕೊಂಡಿದ್ದು, ಇವುಗಳ ಪೈಕಿ ಬಹುತೇಕ Off grid ಮಾದರಿಯದ್ದಾಗಿದ್ದು, ಕೆಲವು ಮಾತ್ರವೇ On grid ಮಾದರಿಯಲ್ಲಿದ್ದವು. (Off grid ಎಂದರೆ, ಸೌರಶಕ್ತಿಯಿಂದ ಉತ್ಪತ್ತಿಯಾಗುವ ವಿದ್ಯುತ್ ಅನ್ನು Backup ನೊಂದಿಗೆ ಸ್ಥಳೀಯವಾಗಿ ಬಳಕೆ ಮಾಡಿಕೊಳ್ಳಬಹುದಾಗಿದ್ದು, Grid ಮೂಲಕ Export ಮಾಡಲು ಆಗುವುದಿಲ್ಲ. ಈ ಮಾದರಿಯಲ್ಲಿ ಉತ್ಪಾದನೆಯಾಗುವ ವಿದ್ಯುತ್, ಕಛೇರಿಯ ರಜೆಯ ದಿನಗಳಲ್ಲಿ ಬಳಕೆಯಾಗದೆ ವ್ಯರ್ಥವಾಗುತ್ತದೆ. On grid ಮಾದರಿಯಲ್ಲಿ ಉತ್ಪತ್ತಿಯಾಗುವ ವಿದ್ಯುತ್ ಅನ್ನು Grid ಮೂಲಕ Export ಮಾಡಬಹುದಾಗಿದ್ದು, ಹೆಚ್ಚುವರಿ ಉತ್ಪತ್ತಿಯಾಗುವ ವಿದ್ಯುತ್ ಅನ್ನು ಆಯಾ ವಿದ್ಯುತ್ ಸರಬರಾಜು ಸಂಸ್ಥೆಗಳಿಗೆ Grid ಮೂಲಕ Export ಮಾಡುವುದರ ಮೂಲಕ ಆದಾಯವನ್ನು ಗಳಿಸಬಹುದಾಗಿದೆ. ಆದರೆ, ಈ ಮಾದರಿಯಲ್ಲಿ Backup ಲಭ್ಯವಾಗುವುದಿಲ್ಲ)<br><br>ಕೆಲವು ಗ್ರಾಮ ಪಂಚಾಯತಿಗಳು ಸ್ಥಳೀಯವಾಗಿ ಅಳವಡಿಸಿಕೊಂಡಿದ್ದ ಸೋಲಾರ್ ರೂಫ್ ಟಾಪ್‌ಗಳನ್ನು |

| | | |
|---|---|---|
| | | ಒದಗಿಸಿದ್ದ ತಯಾರಿಕಾ ಸಂಸ್ಥೆ/ಏಜೆನ್ಸಿಯವರು ಸಮರ್ಪಕವಾಗಿ ನಿರ್ವಹಣೆ ಮಾಡದಿರುವುದು ಮತ್ತು ಸೋಲಾರ್ ಪರಿಕರಗಳು ಉತ್ತಮ ಗುಣಮಟ್ಟದ್ದಾಗಿರದ ಕಾರಣಗಳಿಂದಾಗಿ ಅವುಗಳು ದೀರ್ಘಕಾಲ ಬಾಳಿಕೆ ಬರುತ್ತಿರುಲಿಲ್ಲ. ಈ ಹಿನ್ನೆಲೆಯಲ್ಲಿ, Ongrid ಮತ್ತು Offgrid ಎರಡೂ ಮಾದರಿಗಳಲ್ಲಿ ಕಾರ್ಯನಿರ್ವಹಿಸುವ Grid Interactive Hybrid Solar Rooftop Power Plantsಗಳನ್ನು ಅಳವಡಿಸುವ ಸಲುವಾಗಿ ರಾಜ್ಯ ಮಟ್ಟದಲ್ಲಿ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿತ್ತು. ಹಲವಾರು ರಾಜ್ಯಗಳಿಂದ ಬಿಡ್ಡುದಾರರು ಟೆಂಡರ್ ನಲ್ಲಿ ಭಾಗವಹಿಸಿದ್ದು, ಕೆ.ಟಿ.ಪಿ.ಪಿ ನಿಯಮಗಳನ್ವಯ ಎರಡು ಹಂತಗಳಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಟೆಂಡರ್ ನೆಗೋಷಿಯೇಷನ್ ಕಮಿಟಿ ಹಾಗೂ ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯಂತೆ, ಘಟಕಗಳ ಪ್ಯಾಕೇಜುವಾರು ಮತ್ತು ಐಟಂವಾರು ದರಗಳನ್ನು ಅಂತಿಮಗೊಳಿಸಿ ಐದು ಅರ್ಹ ಗುತ್ತಿಗೆದಾರ ಸಂಸ್ಥೆಗಳನ್ನು ಆಯ್ಕೆ ಮಾಡಿದ್ದು,ಜಿಲ್ಲಾವಾರು ಹಂಚಿಕೆ ಮಾಡಲಾಗಿರುತ್ತದೆ.<br><br>ಸದರಿ ಕಾರ್ಯಕ್ರಮದ ಟೆಂಡರ್ ಪ್ರಕ್ರಿಯೆಗಳ ಸಂದರ್ಭದಲ್ಲಿ ನುರಿತ ತಾಂತ್ರಿಕ ಪರಿಣಿತರ ಸಲಹೆ/ಮಾರ್ಗದರ್ಶನಗಳನ್ನು ಪಡೆದಿದ್ದು, ಉತ್ಕೃಷ್ಟ ಮಟ್ಟದ ಸೋಲಾರ್ ಉಪಕರಣಗಳನ್ನು ಮಾತ್ರ ಬಳಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಸೋಲಾರ್ ರೂಫ್ ಟಾಪ್ ಉಪಕರಣಗಳು ಅಳವಡಿಕೆಯಾಗುವ ಮುನ್ನ ಬೆಂಗಳೂರಿನಲ್ಲಿ Pre Dispatch Inspection ಗೆ ಒಳಪಡುವುದರಿಂದ ಮತ್ತು ಅಳವಡಿಕೆಯಾಗುವ ಸ್ಥಳದಲ್ಲಿ Post Delivery Inspection ಕೂಡ ಆಗುವುದರಿಂದ, ಉತ್ತಮ ಗುಣಮಟ್ಟದ ಸೋಲಾರ್ ರೂಫ್ ಟಾಪ್ ಅಳವಡಿಸಲು ಸಹಕಾರಿಯಾಗುತ್ತದೆ. ಪ್ರಮುಖವಾಗಿ, ಸದರಿ ಯೋಜನೆಯಲ್ಲಿ 5 ವರ್ಷಗಳ ವಾರಂಟಿ ಇದ್ದು, ವಾರಂಟಿ ಅವಧಿಯ ನಂತರ ಗುತ್ತಿಗೆದಾರ ಸಂಸ್ಥೆಗಳು ಸೋಲಾರ್ ರೂಫ್ ಟಾಪ್ ಘಟಕಗಳನ್ನು 10 ವರ್ಷಗಳ ಕಾಲ ನಿರ್ವಹಣೆ ಮಾಡಬಹುದಾದ ಆಯ್ಕೆಯನ್ನೂ ಸಹ ಸೇರ್ಪಡೆಗೊಳಿಸಲಾಗಿರುತ್ತದೆ. |

**ಸಂಖ್ಯೆ: ಗ್ರಾಅಪಂರಾ 414 ಜಿಪಸ 2022**

**(ಬಸವರಾಜ ಬೊಮ್ಮಾಯಿ)**

ಮುಖ್ಯ ಮಂತ್ರಿ